# ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ರೋಣ.

**ಸಿ.ಸಿ. ನಂ.685/2025**

**ಫಿರ್ಯಾದಿದಾರರು** - ಕರ್ನಾಟಕ ಸರ್ಕಾರ (ಗಜೇಂದ್ರಗಡ ಪೋಲಿಸ್)

**ವಿರುದ್ಧ**

ಆರೋಪಿತರು -

1. ಶರಣವ್ವ ಕೋಂ ಈಶಪ್ಪ ಮಡಿವಾಳರ,
ವಯಾಃ 43 ವರ್ಷ, ಉಃ ಹೊಲಮನೆ ಕೆಲಸ,
ಸಾಃ ಸೂಡಿ, ತಾಃ ಗಜೇಂದ್ರಗಡ, ಜಿಃ ಗದಗ.

2. ಚಂದ್ರವ್ವ ಕೋಂ ಯಂಕಪ್ಪ ಪೂಜಾರ,
ವಯಾಃ 51 ವರ್ಷ, ಉಃ ಹೊಲಮನೆ ಕೆಲಸ,
ಸಾಃ ಚಿಕ್ಕೊಪ್ಪ, ತಾಃ ರಾಮದುರ್ಗಾ, ಜಿಃ ಬೆಳಗಾವಿ.

3. ಸಕ್ರವ್ವ ಉರ್ಫ್ ಶಂಕ್ರವ್ವ ಕೋಂ ಅರ್ಜುನಪ್ಪ ವೀರಗಂಟಿ,
ವಯಾಃ 67 ವರ್ಷ, ಉಃ ಹೊಲಮನೆ ಕೆಲಸ ,
ಸಾಃ ಸೂಡಿ, ತಾಃ ಗಜೇಂದ್ರಗಡ, ಜಿಃ ಗದಗ.

## ದೋಷಾರೋಪಣೆ

ಶ್ರೀ. ಹುಲುಗಪ್ಪ ಡಿ., ಬಿ.ಎ., ಎಲ್ ಎಲ್ ಬಿ., ಪ್ರಧಾನ ದಿವಾಣಿ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ., ರೋಣ ಆದ ನಾನು ನಿಮ್ಮ ವಿರುದ್ಧ ಮಾಡುತ್ತಿರುವ ದೋಷಾರೋಷಣೆ ಏನೆಂದರೆಃ-

ದಿನಾಂಕ 12.01.2025 ರಂದು ಮಧ್ಯಾಹ್ನ 03.00 ಗಂಟೆ ಸುಮಾರಿಗೆ ಗಜೇಂದ್ರಗಡ ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಚಾಸಾ-1, 4 ರಿಂದ 5 ರವರು ಇಟಗಿ ಗ್ರಾಮದ ಹದ್ದಿಯಲ್ಲಿ ಬರುವ ಚಾಸಾ-1 ರವರ ಜಮೀನು ರಿ.ಸ. ನಂ.459/4+5 ರಲ್ಲಿ ಮೆಕ್ಕೆಜೋಳ ತೆನಿಗಳನ್ನು ಮುರಿಯಲು ಹೋದಾಗ ಆರೋಪಿತರಾದ ನೀವುಗಳು ಅಪಕೃತ್ಯ ಮಾಡುವ ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಚಾಸಾ-1 ರವರ ಜಮೀನಿನಲ್ಲಿ ಅತೀಕ್ರಮಣ ಪ್ರವೇಶ ಮಾಡಿರುತ್ತೀರಿ ಎಂದು, ಆ ಮೂಲಕ ಭಾ.ನ್ಯಾಸಂ. ಕಲಂ **329 (3)** ಸಹವಾಚಕ ಕಲಂ **3(5)** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೋಷಾರೋಪಣೆ ಮಾಡುತ್ತಿದ್ದೇನೆ.

**2.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಕೂಡಿಕೊಂಡು ಅಪಕೃತ್ಯ ಮಾಡುವ ಸಮಾನ ಉದ್ದೇಶದಿಂದ, ಆರೋಪಿತರಾದ ನೀವುಗಳು ಚಾಸಾ-1 ರವರಿಗೆ "ಇದು ಹಿರಿಯರ ಆಸ್ತಿ ನಮಗ ಕೊಟ್ಟಾರ ಅಂತಾ ನೀವು ಯಾಕ ಇಲ್ಲಿಗೆ ಬಂದಿರಿ ಹದರಗಿತ್ತಿ" ಎಂದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಅವರಿಗೆ ಉದ್ದೇಶ ಪೂರ್ವಕವಾಗಿ ಅವಮಾನಮಾಡಿ, ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿ, ಆ ಉದ್ರೇಕದಿಂದ ಅವರು ಶಾಂತಿ ಭಂಗ ಮಾಡುವ ಸಂಭವವಿದೆಯೆಂದು ತಿಳಿದು ಸಹ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತೀರಿ ಎಂದು, ಆ ಮೂಲಕ ಭಾ.ನ್ಯಾ.ಸಂ. ಕಲಂ **352** ಸಹವಾಚಕ ಕಲಂ **3(5)** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೋಷಾರೋಪಣೆ ಮಾಡುತ್ತಿದ್ದೇನೆ.

**3.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಕೂಡಿಕೊಂಡು ಅಪಕೃತ್ಯ ಮಾಡುವ ಸಮಾನ ಉದ್ದೇಶದಿಂದ, ಆರೋಪಿತರಾದ ನೀವುಗಳು ಚಾಸಾ-1 ರವರಿಗೆ ಕೈಯಿಂದ ಬೆನ್ನಿಗೆ ಹೊಡಿಬಡಿ ಮಾಡಿರುತ್ತೀರಿ ಎಂದು, ಆ ಮೂಲಕ ಭಾ.ನ್ಯಾ.ಸಂ. ಕಲಂ **115(2)** ಸಹವಾಚಕ ಕಲಂ **3(5)**ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೋಷಾರೋಪಣೆ ಮಡುತ್ತಿದ್ದೇನೆ.

**4.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪಕೃತ್ಯ ಮಾಡುವ ಸಮಾನ ಉದ್ದೇಶದಿಂದ, ಆರೋಪಿತರಾದ ನೀವುಗಳು ಚಾಸಾ-1 ರವರಿಗೆ ಚಾಸಾ-4 ರಿಂದ ಚಾಸಾ-7 ರವರು ಹೊಡೆಯುವುದನ್ನು ಬಿಡಿಕೊಂಡಿದ್ದು, ಆಗ ನೀವುಗಳು "ಇನ್ನೊಮ್ಮೆ ಸಿಗರಿ ನಮ್ಮ ಕೈಯಾಗ, ಜೀವ ಸಹಿತ ಬಿಡೋದಿಲ್ಲಾ" ಎಂದು ಜೀವದ ಬೆದರಿಕೆ ಹಾಕಿ ಅವರಿಗೆ ಭೀತಿ ಹುಟ್ಟಿಸಿದ್ದೀರಿ ಎಂದು, ಈ ಮೂಲಕ ಭಾ.ನ್ಯಾ.ಸಂ. ಕಲಂ **351(2)** ಸಹವಾಚಕ ಕಲಂ **3(5)** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೋಷಾರೋಪಣೆ ಮಡುತ್ತಿದ್ದೇನೆ.

ಮೇಲ್ಕಂಡ ಆರೋಪಗಳನ್ನು ಆರೋಪಿತರಾದ ನೀವುಗಳು ಈ ನ್ಯಾಯಾಲಯದ ವಿಚಾರಣಾ ವ್ಯಾಪ್ತಿಯಲ್ಲಿ ಎಸಗಿರುವುದರಿಂದ ಸದರಿ ಆರೋಪಗಳಿಗೆ ನನ್ನ ಮುಂದೆ ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

ದಿನಾಂಕಃ

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ರೋಣ.

<u>ಆರೋಪಿತರ ಹೇಳಿಕೆ</u>

1. ಈ ಮೇಲೆ ಓದಿ ಹೇಳಿದ ದೋಷರೋಪಣೆಯ ನಿಮಗೆ ಅರ್ಥವಾಯಿತೆ?

ಉತ್ತರಃ ಆರೋಪಿ ನಂ.1)

ಆರೋಪಿ ನಂ.2)

ಆರೋಪಿ ನಂ.3)

2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ವಿಚಾರಣೆಯಾಗಬೇಕೆಂದು ಬಯಸುವಿರೋ?

ಉತ್ತರಃ ಆರೋಪಿ ನಂ.1)

ಆರೋಪಿ ನಂ.2)

ಆರೋಪಿ ನಂ.3)

(ಮೇಲೆ ಹೇಳಿದ ದೋಷರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿ ತಿಳಿಸಿ, ಸದರಿ ಆರೋಪಿತರು ನೀಡಿದ ಉತ್ತರಗಳನ್ನು ತೆರೆದ ನ್ಯಾಯಲಯದಲ್ಲಿ ದಿನಾಂಕ ರಂದು ದಾಖಲಿಸಿದೆ.)

ದಿನಾಂಕಃ

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ರೋಣ.

<u>ಆರೋಪಿತರ ಸಹಿಃ</u>